ಎಂದೂ ಕರೆಯಲಾಗುತ್ತಿದೆ. ಈ ಪಿರೀಯಡ್‌ಗಳಲ್ಲಿ ಮಕ್ಕಳು ತಮ್ಮ ಸ್ವಂತ ಕೈಗಳಿಂದ ಕರಕುಶಲ ವಸ್ತುಗಳನ್ನು ತಯಾರಿಸುವುದನ್ನು ಕಲಿಸಲಾಗುತ್ತಿದೆ.

ಇದಲ್ಲದೆ ಕೇಂದ್ರ ಪುರಸ್ಕೃತ ವೃತ್ತಿ ಶಿಕ್ಷಣ ಕಾರ್ಯಕ್ರಮದ ಅಡಿ ಪ್ರಿ ವೊಕೇಷನಲ್ ಕಾರ್ಯಕ್ರಮವನ್ನು ಪ್ರೌಢ ಶಾಲಾ ಹಂತದಲ್ಲಿ 9 ಮತ್ತು 10ನೇ ತರಗತಿಗಳಲ್ಲಿ ಜಾರಿಗೆ ತರಲು ಕೇಂದ್ರ ಸರ್ಕಾರ ಯೋಜಿಸುತ್ತಿದೆ. ಇದು +2 ಹಂತಗಳಲ್ಲಿ ವೃತ್ತಿ ಶಿಕ್ಷಣವನ್ನು ಬಯಸುವ ವಿದ್ಯಾರ್ಥಿಗಳಿಗೆ ಉಯಪಯುಕ್ತವಾಗುವುದಾಗಿ ಭಾವಿಸಿದೆ. ಇದನ್ನು ಜಾರಿಗೆ ತರುವ ಸಾಧ್ಯಾಸಾಧ್ಯತೆಗಳನ್ನು ಸರ್ಕಾರ ಪರಿಶೀಲಿಸುತ್ತಿದೆ.

ವಿಷಯ:- ಕಮಲಾಪುರಕ್ಕೆ ಕ್ಷೇತ್ರಕ್ಕೆ ಅರಣ್ಯ ಇಲಾಖೆಯ ಯೋಜನೆಗಳಲ್ಲಿ ಬಂದಿರುವ ಹಣ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 468 (626)

ಶ್ರೀ ರೇವು ನಾಯಕ್ ಬೆಳಮಗಿ (ಕಮಲಾಪುರ):- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ತಾಲ್ಲೂಕು ಕಮಲಾಪುರ ಕ್ಷೇತ್ರಕ್ಕೆ ಅರಣ್ಯ ಇಲಾಖೆಯ ಯೋಜನೆಗಳಲ್ಲಿ ಬಂದಿರುವ ಹಣವೆಷ್ಟು ಈ ಹಣವು ಯಾವ ಯಾವ ಯೋಜನೆಗಳಿಗಾಗಿ ಬಂದಿದೆ.

ಆ) ಈ ಹಣದಿಂದ ಕೈಗೊಂಡ ಕ್ರಮಗಳೇನು (ಯೋಜನಾವಾರು ವಿವರ ನೀಡುವುದು)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):-

ಅ) ರಾಜ್ಯ ವಲಯ ಹಾಗೂ ಜಿಲ್ಲಾ ಯೋಜನೆಯಡಿಯಲ್ಲಿ ಕಮಲಾಪುರ ಕ್ಷೇತಕ್ಕೆಂದೆ ಪ್ರತ್ಯೇಕವಾಗಿ ಅನುದಾನವನ್ನು ನಿಗದಿಪಡಿಸಲಾಗಿರುವುದಿಲ್ಲ. ಆದರೂ ಅನುದಾನದ ಲಭ್ಯತೆಗೆ ಅನುಗುಣವಾಗಿ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಿ [illegible] ಅನುಮೋದನೆ ನೀಡಿ, ಅರಣ್ಯೀಕರಣ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಲಾಗುವುದು. ಕಳೆದ ಮೂರು ವರ್ಷಗಳಲ್ಲಿ ಕಮಲಾಪುರ ಕ್ಷೇತ್ರಕ್ಕೆ ಅರಣ್ಯೀಕರಣಕ್ಕಾಗಿ ಬಿಡುಗಡೆಯಾಗಿರುವ ಅನುದಾನದ ವಿವರಗಳು ಈ ಕೆಳಕಂಡಂತಿದೆ.

ಜಿಲ್ಲಾ ವಲಯ

		1993-94	1994-95	1995-96
			(ಲಕ್ಷ ರೂ.ಗಳಲ್ಲಿ)	
1)	ಜೆ.ಆರ್.ವೈ	3.536	1.416	3.975
2)	ಡಿ.ಪಿ.ಎ.ಪಿ.	1.177	-	-
3)	ಎಸ್.ಸಿ.ಪಿ. (ಕೇಂದ್ರ)	0.167	-	-
4)	ಕೆ.ಎಸ್.ಎಫ್.ಪಿ. (ಕ.ಸಾಮಾಜಿಕ ಅರಣ್ಯಯೋಜನೆ)	0.145	-	1.80
5)	ಉದ್ಯೋಗ ಭರವಸೆ ಯೋಜನೆ (ಕೇಂದ್ರ)	-	4.837	8.75

ರಾಜ್ಯ ವಲಯ

1)	ಕ್ಷೀಣಿತ ಅರಣ್ಯ ಅಭಿವೃದ್ಧಿ ಯೋಜನೆ	0.90	0.360	0.080
2)	ಕೇಂದ್ರ ಪುರಸ್ಕೃತ ಪ್ರದೇಶಾಧಾರಿತ ಮತ್ತು ಮೇವು ಯೋಜನೆ	0.70	1.028	1.710
3)	ಸಾಮಾಜಿಕ ಅರಣ್ಯ (ರಾಜ್ಯ)	1.00	1.397	0.920
4)	ಸಾರ್ವಜನಿಕರಿಗೆ ವಿತರಿಸಲು ಸಸಿಗಳನ್ನು ಬೆಳೆಸುವುದು.	0.77	0.230	-

ಅ) ಉಪ ಪ್ರಶ್ನೆ (ಆ)ನಲ್ಲಿ ತೋರಿಸಿರುವ ಮೊತ್ತದಿಂದ ಕಮಲಾಪುರ ಕ್ಷೇತ್ರದಲ್ಲಿ ನೆಡುತೋಪನ್ನು ಬೆಳೆಸುವುದು, ಹಿಂದೆ ಬೆಳೆಸಿದ ನೆಡುತೋಪುಗಳ ನಿರ್ವಹಣೆ,

ಸಸಿಗಳನ್ನು ಬೆಳೆಸುವುದು ಮತ್ತು ಬೆಳೆಸಿದ ಸಸಿಗಳ ನಿರ್ವಹಣೆ ಇತ್ಯಾದಿ ಕೆಲಸ ಕಾರ್ಯಗಳ ಯೋಜನಾವಾರು ವಿವರವು ಈ ಕೆಳಕಂಡಂತಿರುವುದು.

ಕ್ರ. ಸಂ.	ಯೋಜನೆಯ ಹೆಸರು	ನೆಡು ತೋಪು ಬೆಳೆಸುವುದು (ಹೆಕ್ಟೇರ್)	ನೆಡು ತೋಪು ಪೋಷಣಾ (ಹೆಕ್ಟೇರ್)	ಸಸಿಗಳ ಪೋಷಣೆ (ಸಂಖ್ಯೆ ಲಕ್ಷಗಳಲ್ಲಿ)	ಸಸಿಗಳನ್ನು ಬೆಳೆಸುವುದು (ಸಂಖ್ಯೆ ಲಕ್ಷಗಳಲ್ಲಿ)	ಮುಂಗಡ ಕಾಮಗಾರಿ (ಹೆಕ್ಟೇರ್)
1	2	3	4	5	6	7
1993-94						
1.	ಕ್ಷಿಣಿತ ಅರಣ್ಯ ಅಭಿವೃದ್ಧಿ ಯೋಜನೆ	10	20	-	0.50	-
2.	ಪ್ರದೇಶ ಆಧಾರಿತ ಉರುವಲು ಮತ್ತು ಮೇವು ಯೋಜನೆ	-	40	-	-	10
3.	ಸಾಮಾಜಿಕ ಅರಣ್ಯ (ರಾಜ್ಯ)	-	-	-	0.50	30
4.	ಸಾರ್ವಜನಿಕರಿಗೆ ವಿತರಿಸಲು ಬೆಳೆಸಿದ ಸಸಿಗಳು	-	-	-	1.00	-
5.	ಜೆ.ಆರ್.ವೈ.	33.3	-	-	0.25	12
6.	ಡಿ.ಪಿ.ಎ.ಪಿ.	14.0	-	-	-	-
7.	ಎಸ್.ಸಿ.ಪಿ. (ಕೇಂದ್ರ)	2.5	-	-	-	-
8.	ಸಾಮಾಜಿಕ ಅರಣ್ಯ (ಜಿಲ್ಲಾವಲಯ)	2.0	-	-	-	-

1	2	3	4	5	6	7
9.	ಇ.ಎ.ಎಸ್.	-	-	-	0.55	33.5
1994-95						
1.	ಕ್ಷಣಿತ ಅರಣ್ಯ ಅಭಿವೃದ್ಧಿ ಯೋಜನೆ	-	20	0.50	-	-
2.	ಪ್ರದೇಶ ಆಧಾರಿತ ಉರುವಲು ಮತ್ತು ಮೇವು ಯೋಜನೆ	10	20	-	-	30
3.	ಸಾಮಾಜಿಕ ಅರಣ್ಯ (ರಾಜ್ಯ)	30	-	0.50	0.50	10
4.	ಸಾರ್ವಜನಿಕರಿಗೆ ವಿತರಿಸಲು ಬೆಳೆಸಿದ ಸಸಿಗಳು	-	-	1.00	-	-
5.	ಜೆ.ಆರ್.ವೈ.	12	33.3	-	0.45	52.25
6.	ಡಿ.ಪಿ.ಎ.ಪಿ.	-	14.0	-	-	-
7.	ಸಾಮಾಜಿಕ ಅರಣ್ಯ (ಜಿಲ್ಲಾವಲಯ)	-	2.5	-	0.25	30.00
8.	ಇ.ಎ.ಎಸ್.	33.5	2.0	-	1.15	145.5
1995-96						
1.	ಕ್ಷಣಿತ ಅರಣ್ಯ ಅಭಿವೃದ್ಧಿ ಯೋಜನೆ	-	10.0	-	-	-

1	2	3	4	5	6	7
2.	ಪ್ರದೇಶ ಆಧಾರಿತ ಉರುವಲು ಮತ್ತು ಮೇವು ಯೋಜನೆ	20.0	10	-	0.50	20.00
3.	ಸಾಮಾಜಿಕ ಅರಣ್ಯ (ರಾಜ್ಯ)	20.0	30	0.50	-	-
4.	ಸಾರ್ವಜನಿಕರಿಗೆ ವಿತರಿಸಲು ಬೆಳೆಸಿದ ಸಸಿಗಳು	-	-	-	-	-
5.	ಜೆ.ಆರ್.ವೈ.	52.25	45.3	-	-	-
6.	ಸಾಮಾಜಿಕ ಅರಣ್ಯ (ಜಿಲ್ಲಾವಲಯ)	30.00	2.0	-	0.10	-
7.	ಡಿ.ಪಿ.ಎ.ಪಿ.	-	14.0	-	-	-
8.	ಇ.ಎ.ಎಸ್.	145.50	33.5	-	0.25	-

ವಿಷಯ:- ಕಮಲಾಪುರ ಮತ ಕ್ಷೇತ್ರದಲ್ಲಿ ಕುಡಿಯುವ ನೀರಿನ ಅಭಾವ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 469 (639)

ಶ್ರೀ ರೇವು ನಾಯಕ್ ಬೆಳಮಗಿ (ಕಮಲಾಪುರ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಮಲಾಪುರ, ಕೊತ್ತನ ಹಿಪ್ಪರಗ, ಶಿರೂರು(ಜಿ), ಡೊರಜಂಬಗಾ, ಮಾಸ್ಲಾಪುರ ತಾಂಡಾ ಈ ಗ್ರಾಮ ಹಾಗೂ ನನ್ನ ಕ್ಷೇತ್ರದ ಇನ್ನಿತರ ಕಡೆ ನೀರಿನ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವವನ್ನು ನೀಗಿಸುವ ನಿಟ್ಟಿನಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ಸಚಿವರು):-